# ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ

## ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ ಆವರಣ,

## ಎನ್.ಆರ್. ಸ್ಕ್ವೇರ್, ಬೆಂಗಳೂರು–02. ದೂರವಾಣಿ ಸಂಖ್ಯೆ: 22975586 – 89

*1) ಬಿಎಂಟಿಎಫ್ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:*

ಬೆಂಗಳೂರು ಮಹಾನಗರ ಕಾರ್ಯಚರಣೆ ಪಡೆಯು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಸೇರಿದ ಕಾರ್ಯಾಚರಣೆ ಪಡೆಯಾಗಿರುತ್ತದೆ. ಈ ಪಡೆಯ ಸಂಪೂರ್ಣ ಮೇಲ್ವಿಚಾರಣೆ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರದಾಗಿರುತ್ತದೆ.

ಪೊಲೀಸ್ ಮಹಾನಿರೀಕ್ಷಕರು ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯ ಮುಖ್ಯಸ್ಥರಾಗಿರುತ್ತಾರೆ.

ಪೊಲೀಸ್ ಮಹಾನಿರೀಕ್ಷಕರು

| | | |
|---|---|---|
| ಜಂಟಿ ಆಯುಕ್ತರು | ಪೊಲೀಸ್ ಅಧೀಕ್ಷಕರು | ಜಂಟಿ ನಿರ್ದೇಶಕರು |
| ಕಂದಾಯ ಅಧಿಕಾರಿ | ಪೊಲೀಸ್ ಉಪಾಧೀಕ್ಷಕರು | ಉಪ ನಿರ್ದೇಶಕರು 01 |
| ಶಾಖಾಧೀಕ್ಷಕರು | ಪೊಲೀಸ್ ಇನ್ಸ್‌ಪೆಕ್ಟರ್–2 | ಸಹಾಯಕ ನಿರ್ದೇಶಕರು 02 |
| ಪ್ರ.ದ.ಸ.–4 / ಶೀಘ್ರಲಿಪಿಗಾರರು–4 ; ದ್ವಿ.ದ.ಸ.–5 / ಬೆರಳಚ್ಚುಗಾರರು –5 | ಪಿ.ಎಸ್.ಐ.–4 | ನಗರ ಯೋಜಕರು –4 |
| ವಾಹನ ಚಾಲಕರು–3 ; ಎಪಿಸಿ (ವಾಹನ ಚಾಲಕರು) – 9 | ಸಿಹೆಚ್.ಸಿ.–4 ; ಸಿಪಿ.ಸಿ–16 | ಸಹಾಯಕ ನಗರ ಯೋಜಕರು–8 |
| | 4ನೇ ದರ್ಜೆ ನೌಕರರು–4 | |

ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಬಿಬಿಎಂಪಿ, ಬಿಎಂಆರ್‌ಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಕೆಐಎಡಿಬಿ, ಕೆಹೆಚ್‌ಬಿ, ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಇತರೆ ಸಂಸ್ಥೆಗಳು / ಮಂಡಳಿಗಳ ವ್ಯಾಪ್ತಿಯಲ್ಲಿನ ಸರ್ಕಾರಿ ಸ್ವತ್ತುಗಳ ಒತ್ತುವರಿ, ಕಟ್ಟಡ ನಕ್ಷೆ ಉಲ್ಲಂಘನೆ, ಅನಧಿಕೃತ ಬಡಾವಣೆಗಳ ನಿರ್ಮಾಣ, ಮಾಸ್ಟರ್ ಪ್ಲಾನ್‌ನಲ್ಲಿನ ಭೂ ಉಪಯೋಗಗಳ ಉಲ್ಲಂಘನೆ, ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮ ಜರುಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

| ಕ್ರ.ಸಂ. | ಸರ್ಕಾರದ ಆದೇಶ ಸಂಖ್ಯೆ | ವಿವರ |
|---|---|---|
| 1 | ನಂ. ಯುಡಿಡಿ 247 ಎಂಎಸ್‌ಯು 95, ಬೆಂಗಳೂರು ದಿ:19.3.1996 | ಬಿಎಂಟಿಎಫ್ ರಚನೆ ಮತ್ತು ಕಾರ್ಯವ್ಯಾಪ್ತಿಯ ಬಗ್ಗೆ |
| 2 | ನಂ.ಹೆಚ್‌ಡಿ 231 ಪಿಇಜಿ 95, ಬೆಂಗಳೂರು ದಿನಾಂಕ 27-05-1006 | ಡಿಐಜಿ, ಬಿಎಂಟಿಎಫ್ ಕಛೇರಿಯ ಕಾರ್ಯವ್ಯಾಪ್ತಿಯನ್ನು ಬೆಂಗಳೂರು ಮೆಟ್ರೋಪಾಲಿಟನ್ ಏರಿಯಾ ಪ್ರದೇಶಕ್ಕೆ ಪೊಲೀಸ್ ಠಾಣೆಯನ್ನಾಗಿ ಘೋಷಿಸಿರುವ ಬಗ್ಗೆ |
| 3 | ನಂ.ನಅಇ 133 ಎಂಎಸ್‌ಯು 96, ದಿನಾಂಕ 31-01-1997 | ಬಿಎಂಟಿಎಫ್ ಸಿಬ್ಬಂದಿಗಳ ಸಂಬಳ ಇತ್ಯಾದಿ ಭತ್ಯೆಗಳನ್ನು ನೀಡಲು ಉಪ ಆಯುಕ್ತರು, ಬಿಎಂಟಿಎಫ್ ರವರಿಗೆ ಅಧಿಕಾರ ನೀಡುವ ಬಗ್ಗೆ |
| 4 | ನಂ.ಯುಡಿಡಿ 110 ಎಂ.ಎಸ್‌ಯು 97, ಬೆಂಗಳೂರು ದಿನಾಂಕ:28.08.1997 | ಬಿಎಂಟೆಫ್ ಗೆ ಇನ್‌ಸ್ಪೆಕ್ಟರ್ ರವರನ್ನು ಮುಖ್ಯಸ್ಥರನ್ನಾಗಿ ನೀಮಿಸಿ, ಕರ್ತವ್ಯಗಳನ್ನು ವಿವರಿಸಿರುವ ಬಗ್ಗೆ |
| 5 | ನಂ ನಅಇ 1 ಬಿಎಂಆರ್ 2001 ಬೆಂಗಳೂರು ದಿನಾಂಕ: 6.8.2001 | ಬಿಎಂಟಿಎಫ್ ಕಾರ್ಯವ್ಯಾಪ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೋಲಾರ ಜಿಲ್ಲೆ ಮಾಲೂರು ತಾ: ಸೇರಿಸಿರುವ ಬಗ್ಗೆ |
| 6 | ನಂ.ಹೆಚ್‌ಡಿ 181 ಪಿಒಪಿ 2001, ಬೆಂಗಳೂರು ದಿನಾಂಕ 02-09-2002 | ಬಿಎಂಟಿಎಫ್‌ನ ವಿವಿಧ ಅಧಿಕಾರಿಗಳ ಕಾರ್ಯವ್ಯಾಪ್ತಿ ಗೆ ಬರುವ ಪೊಲೀಸ್ ಠಾಣೆಗಳ ಕಾರ್ಯವ್ಯಾಪ್ತಿ ಪ್ರದೇಶಗಳನ್ನು ನಿಗಧಿಪಡಿಸಿರುವ ಬಗ್ಗೆ |
| 7 | ನಂ.ಯುಡಿಡಿ 132 ಎಂಎಸ್‌ಯು 2004 ದಿನಾಂಕ 17-11-2004 | ಬಿಎಂಟಿಎಫ್ ಕಾರ್ಯಚಟುವಟಿಕೆಗಳನ್ನು ತಿದ್ದುಪಡಿ ಮಾಡಿ ಬಿಎಂಐಸಿಎಪಿಎ ಪ್ರದೇಶವನ್ನು ಸೇರಿಸಿ ಆದೇಶ ಹೊರಡಿಸಿರುವ ಬಗ್ಗೆ |
| 8 | ನಂ.ನಅಇ 363 ಎಂಎಸ್‌ಯು 2009 ಬೆಂಗಳೂರು ದಿ.08-12-2009 | ಬಿಎಂಟಿಎಫ್ ನಲ್ಲಿ ನಗರ ಯೋಜನೆ ಉಪನಿರ್ದೇಶಕರು ಮತ್ತಿತರ 15 ತಾಂತ್ರಿಕ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿರುವ ಬಗ್ಗೆ |

## 2) *<u>ಬಿಎಂಟಿಎಫ್ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು:-</u>*

| | | |
|---|---|---|
| 1) | ಆರಕ್ಷಕ ಮಹಾನಿರೀಕ್ಷಕರು | ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಘಟಕದ ಮುಖ್ಯಸ್ಥರು ಹಾಗೂ ಮೇಲ್ವಿಚಾರಕರು ಬಿ.ಎಂ.ಟಿ.ಎಫ್ ಘಟಕಕ್ಕೆ ಸಂಬಂಧಿಸಿದಂತೆ ಸೂಕ್ತ ಆದೇಶ ಹಾಗೂ ಸುತ್ತೋಲೆಗಳನ್ನು ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ತಮ್ಮ ಅಧೀನದಲ್ಲಿ ಬರುವ ಸಿಬ್ಬಂದಿ / ನೌಕರರುಗಳಿಗೆ ಸೂಕ್ತ ನಿರ್ದೇಶನ ನೀಡುವುದು. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು ಹಾಗೂ ಮೇಲ್ಮನವಿ ಅರ್ಜಿಗಳು ಸರಿಯಾದ ಸಮಯಕ್ಕೆ ವಿಲೇವಾರಿಯಾಗುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಸಿಬ್ಬಂದಿ / ನೌಕರರುಗಳಿಗೆ ನಿರ್ದೇಶನ ನೀಡುವುದು. ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧೀನದಲ್ಲಿ ಬಿಬಿಎಂಪಿ, ಕರ್ನಾಟಕ ರಾಜ್ಯ ಕೊಳಚೆ ಪ್ರದೇಶ ನಿರ್ಮೂಲನ ಮಂಡಳಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೆ.ಐ.ಎ.ಡಿ.ಬಿ. ಇನ್ನಿತರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಅಗತ್ಯನುಸಾರ ಪೊಲೀಸ್ ರಕ್ಷಣೆ ಒದಗಿಸುವ ಬಗ್ಗೆ |

| | | |
|---|---|---|
| | ಆರಕ್ಷಕ ಅಧೀಕ್ಷಕರು | ಬಿ.ಎಂ.ಟಿ.ಎಫ್ ಘಟಕದ ಕಛೇರಿ ಮೇಲ್ವಿಚಾರಣೆ ಹಾಗೂ ಪೊಲೀಸ್ ಶಾಖೆಯ ನಿಯಂತ್ರಣ ಹಾಗೂ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಮ್ಮ ಅಧೀನ ಅಧಿಕಾರಿ/ ಸಿಬ್ಬಂದಿಯವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು |
| | ಜಂಟಿ ಆಯುಕ್ತರು | ಬಿ.ಎಂ.ಟಿ.ಎಫ್ ಘಟಕದ ಬಟವಾಡೆ ಅಧಿಕಾರಿಯಾಗಿರುತ್ತಾರೆ ಹಾಗೂ ಆಡಳಿತ ಶಾಖೆಯ ಎಲ್ಲಾ ಸಿಬ್ಬಂದಿಯವರುಗಳಿಗೆ ಸೂಕ್ತ ಕಛೇರಿ ಕೆಲಸ ಕಾರ್ಯಗಳಲ್ಲಿ ಸಲಹೆ ಹಾಗೂ ನಿರ್ದೇಶನಗಳನ್ನು ನೀಡುವುದು. |
| | ಜಂಟಿ ನಿರ್ದೇಶಕರು / ಉಪ ನಿರ್ದೇಶಕರು | ಬಿಎಂಟಿಎಫ್ ಪಡೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವತ್ತುಗಳ ಒತ್ತುವರಿ, ಕಟ್ಟಡ ನಕ್ಷೆ ಉಲ್ಲಂಘನೆ, ಅನಧಿಕೃತ ಬಡಾವಣೆಗಳ ನಿರ್ಮಾಣ, ಮಾಸ್ಟರ್ ಪ್ಲಾನ್‌ನಲ್ಲಿನ ಭೂ ಉಪಯೋಗಗಳ ಉಲ್ಲಂಘನೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಹಾಗೂ ಇತರೆ ಇಲಾಖೆಗಳಿಂದ ಸ್ವೀಕೃತಗೊಂಡ ಅರ್ಜಿಗಳ ಪರಿಶೀಲನೆ ಹಾಗೂ ಸ್ಥಳ ವೀಕ್ಷಿಸಿ ತಾಂತ್ರಿಕ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. |
| | ಪೊಲೀಸ್ ಉಪಾದೀಕ್ಷಕರು | ಮೇಲಾಧಿಕಾರಿಗಳಿಂದ ಹಾಗೂ ಸಾರ್ವಜನಿಕರಿಂದ ಬರುವಂತಹ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಲೇವಾರಿ ಮಾಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು ಪೊಲೀಸ್ ಶಾಖೆಯ ನಿಯಂತ್ರಣ ಹಾಗೂ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಮ್ಮ ಅಧೀನ ಅಧಿಕಾರಿ/ ಸಿಬ್ಬಂದಿಯವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವುದು. |
| | ಕಂದಾಯ ಅಧಿಕಾರಿ | ಬಿಎಂಟಿಎಫ್ ಘಟಕದ ಲಿಪಿಕ ಸಿಬ್ಬಂದಿಯವರ ಮೇಲ್ವಿಚಾರಣೆ, ಅಧಿಕಾರಿಗಳ / ಸಿಬ್ಬಂದಿಗಳ ವೇತನ ಬಿಲ್ಲುಗಳು, ವರ್ಗಾವಣೆ / ರಜೆ / ಸರ್ಕಾರದಿಂದ ಬರುವಂತಹ ಆಡಳಿತ ಶಾಖೆಗೆ ಸಂಬಂಧಿಸುವ ಪತ್ರಗಳ ವ್ಯವಹಾರ ಮತ್ತು ಮೇಲಾಧಿಕಾರಿಗಳ ಆದೇಶದಂತೆ ಕರ್ತವ್ಯ ನಿರ್ವಹಿಸುವುದು. |
| | ನಗರ ಯೋಜಕರು | ಬಿಎಂಟಿಎಫ್ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿನ ಅನಧಿಕೃತ ಕಟ್ಟಡ, ನಕ್ಷೆ ಉಲ್ಲಂಘನೆ ಇತ್ಯಾದಿಗಳ ಸಂಬಂಧ ಸಾರ್ವಜನಿಕರಿಂದ / ಇಲಾಖೆಗಳಿಂದ ಬರುವ ದೂರುಗಳ ಸಂಬಂಧ ಪರಿಶೀಲನೆ ಮತ್ತು ತಾಂತ್ರಿಕ ವರದಿ ನೀಡುವುದು ಮತ್ತು ಮೇಲಾಧಿಕಾರಿಗಳ ಆದೇಶಗಳನುಸಾರ ಕಾರ್ಯ ನಿರ್ವಹಿಸುವುದು. |
| | ಶಾಖಾಧೀಕ್ಷಕರು | ಕಛೇರಿ ಕಾರ್ಯ ನಿರ್ವಹಣೆ. |
| | ಪ್ರ.ದ.ಸ. | |
| | ದ್ವಿ.ದ.ಸ. | |
| | ಬೆರಳಚ್ಚುಗಾರರು | |
| | ಪೊಲೀಸ್ ಇನ್ಸ್‌ಪೆಕ್ಟರ್ | ಮೇಲಾಧಿಕಾರಿಗಳಿಂದ ಹಾಗೂ ಸಾರ್ವಜನಿಕರಿಂದ ಬರುವಂತಹ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಲೇವಾರಿ ಮಾಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು ಹಾಗೂ ಕಾರ್ಯಾಚರಣೆ ಕಾರ್ಯದಲ್ಲಿ ಪಾಲ್ಗೊಳ್ಳುವುದು |
| | ಪೊಲೀಸ್ ಸಬ್ ಇನ್ಸ್‌ಪೆಕ್ಟರ್ | |
| | ಹೆಡ್ ಕಾನ್ಸ್ಟೇಬಲ್ | |
| | ಪೊಲೀಸ್ ಕಾನ್ಸ್‌ಟೇಬಲ್ | |

3) ***ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು:***

ಆರಕ್ಷಕ ಮಹಾನಿರೀಕ್ಷಕರು ಮತ್ತು ಪೊಲೀಸ್ ಅಧೀಕ್ಷಕರ ಸೂಚನೆಗಳನುಸಾರ ಕಾರ್ಯ ನಿರ್ವಹಿಸಲಾಗುತ್ತಿದೆ.

4) ***ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು:***

ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳನುಸಾರ ಕಾರ್ಯ ನಿರ್ವಹಿಸಲಾಗುತ್ತಿದೆ.

5) ***ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:–***

1. ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್, 1976
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಕ್ಟ್, 1976
3. ಕರ್ನಾಟಕ ಮುನ್ಸಿಪಾಲಿಟೀಸ್ ಆಕ್ಟ್ 1964
4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಆಕ್ಟ್ 1964
5. ಕರ್ನಾಟಕ ಸ್ಲಂ ಏರಿಯಾಸ್ (ಇಂಪ್ರೂಮೆಂಟ್ ಅಂಡ್ ಕ್ಲಿಯರೆನ್ಸ್ ) ಆಕ್ಟ್ 1973
6. ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್, 1964
7. ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ಪ್ರೊಹಿಬಿಷನ್ ಆಫ್ ಸರ್ಟೇನ್ ಲ್ಯಾಂಡ್ಸ್) ಆಕ್ಟ್, 1978
8. ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್, 1961
9. ಇನಾಂ ಅಬಾಲಿಷನ್ ಆಕ್ಟ್
10. ಇಂಡಿಯನ್ ಪೀನಲ್ ಕೋಡ್
11. ಕರ್ನಾಟಕ ಪೊಲೀಸ್ ಆಕ್ಟ್, 1963
12. ಬಿಎಂಆರ್‌ಡಿಎ ಆಕ್ಟ್, 1985

6) ***ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ***

1. ಕೆಸಿಎಸ್‌ಆರ್ ಪ್ರಕಾರ ನಿರ್ವಹಿಸುವ ದಾಖಲಾತಿಗಳು

2. ಪೊಲೀಸ್ ಠಾಣೆಗೆ ಸಂಬಂಧಪಟ್ಟ ಕಡತಗಳು

7) ***ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು :–***

ಸಾರ್ವಜನಿಕರು ಪೊಲೀಸ್ ಅಧೀಕ್ಷಕರು, ಬಿಎಂಟಿಎಫ್ ರವರನ್ನು ಸಂಪರ್ಕಿಸಬಹುದು.

(ದೂರವಾಣಿ ಸಂಖ್ಯೆ: 080 22975587 – 080 22975589)

*8) <u>ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳು :–</u>*

ಕಡತಗಳನ್ನು ಗಣಕೀಕರಣಗೊಳಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

*9) <u>ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮ ಮತ್ತು ಇತರ ವಿವರಗಳು :–</u>*

| ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಿ |
|---|---|
| ಪೊಲೀಸ್ ಉಪಾಧೀಕ್ಷಕರು<br>ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ,<br>ಬೆಂಗಳೂರು.<br>ದೂರವಾಣಿ ಸಂ.080 22975589 | ಪೊಲೀಸ್ ಅಧೀಕ್ಷಕರು<br>ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ,<br>ಬೆಂಗಳೂರು.<br>ದೂರವಾಣಿ ಸಂ.080 22975587 |

*10) <u>ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು :–</u>*

ಸರ್ಕಾರದ ವತಿಯಿಂದ ಯಾವುದಾದರೂ ಮಾಹಿತಿಗಳನ್ನು ನಿಗಧಿಗೊಳಿಸಿದಲ್ಲಿ ಅದನ್ನು ಕಾಲಾನುಕಾಲಕ್ಕೆ ಅಳವಡಿಸಲಾಗುವುದು.

ಪೊಲೀಸ್ ಮಹಾನಿರೀಕ್ಷಕರು,
ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ,
ಬೆಂಗಳೂರು.